RegaNo BG 155

— ೬೯ —

17—2—1962

Sri "SATYAVADI"
— DAILY —
MYSORE4
46 th Year

ಸತ್ಯವಾದಿ
SATYAVADI

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ೩೦ಗಳಿಗೆ 6 ಆಣೆ

Protect the cow

ಸ್ಥಾಪಕರು— ಅರಮನೆ ಸಿಂಪ್ಕೇದಾರ್ ಎಂ. ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ಮುಂಜಪ್ಪನವರಿಗೆ ತೊಂದರೆ

ಶೃಂಗೇರಿ-ಕೊಪ್ಪ ಕ್ಷೇತ್ರದಿಂದ ವಿಧಾನ ಸಭೆಗೆ ಶ್ರೀ ಕಡಿದಾಳ ಮುಂಜಪ್ಪನವರು ಸ್ಪರ್ಧಿಸಿರುವುದು ರೆವಿನ್ಯೂ ಮಂತ್ರಿಯಾಗಿರುವ ಅವರು ಭೂಸುಧಾರಣೆ ದೆಸೆಯಿಂದ ತೊಂದರೆಗೆ ಸಿಕ್ಕಿರುವರು. ಅವರು ಗೆಲ್ಲುವ ಅವಕಾಶಗಳಿಗೆ ಅವರ ಪಂಚ ಮಿತ್ರರುಗಳು ಶತ್ರುಗಳಾಗಿರುವರು. ಈ ವರಿಗೆ ಅವರ ಗೆಲುವಿಗೆ ಕಾರಣರಾದವರು ಅವರ ಕೈಬಿಟ್ಟಿರುವರು ಇತ್ತೀಚಿಗೆ ಕಾಂಗ್ರೆಸು ಬಿಟ್ಟ ಶ್ರೀ ಎಸ್ ಪಿ ಗೋವಿಂದೇಗೌಡರನ್ನು ಅವರು ಎದುರಿಸಬೇಕಾಗಿದೆ. ಶಿವಮೊಗ್ಗಾ ಜಿಲ್ಲೆ ಕಾಂಗ್ರೆಸಿಗರೇ ಅವರ ವಿರೋಧ ಕಾರ್ಯ ದಲ್ಲಿದ್ದಾರೆ.

ಮೆನನ್‌ರಿಗೆ ತೊಂದರೆ

ಭಾರತ ರಕ್ಷಣಾ ಮಂತ್ರಿ ಶ್ರೀ ವಿ. ಕೆ. ಮೆನನ್‌ರಿಗೆ ಮತ್ತೊಂದು ತೊಂದರೆ ಆಗಿದೆಯೆಂದು ಬೊಂಬಾಯಿನಿಂದ ವರದಿಯಾಗಿದೆ. ಸಂಯುಕ್ತ ಮಹಾರಾಷ್ಟ್ರದ ಆಗವಾದ ದೈಶ ಹಾಗೂ ಕಾರ್ಮಿಕ ಪಕ್ಷ ಮತ್ತು ವಿಸ್ಕಿಂ ಲೇಗು ತಮ್ಮ ಅನುಯಾಯಿಗಳಿಗೆ ಆಚಾರ್ಯ ಕೃಪಾಲಿಯವರಿಗೆ ಮತಹಾಕುವಂತೆ ತಿಳಿಸುವ ನಿರ್ಧಾರವನ್ನು ಮಾಡಿದೆ ಕೃಪಾಲಿನಿ ಯವರಿಗೆ ಓಟು ಕೊಡುವುದರಿಂದ ಮುಖ್ಯವರು ತಮ್ಮ ಜೀವನಕ್ರಮ ಉಳಿಸಿಕೊಳ್ಳಬಹುದೆಂದು ಮುಸ್ಲಿಂ ಜುನಾವಣೆ ಪರಿತಿ ಪ್ರಕಟಿಸಿದೆ. ಬೊಂಬಾಯಿಗೆ ಮತ್ತೆ ನೆಹರೂರವನ್ನು ಕರೆಸುವ ಪ್ರಯತ್ನ ನಡೆಯುತ್ತಿದೆ ಅವರು ಬರುವುದು ಖಂಡಿತವಾಗಿಲ್ಲ

ಭೂಮಿಗೆ ಬಾಲವಿದೆ

ಧೂಮಕೇತುವಿಗೆ ಇರುವಂತೆ ಭೂಮಿಗೆ ಬಾಲವಿರುವುದೆಂದು ರಷ್ಯದ ಖಗೋಳ ಭೌತಜ್ಞ ಪ್ರೊ || ವಾಸೆಲಿ ಫೆವಸ್ಕೋವರು ಮಾಸ್ಕೋವಿನಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷತೆ

ಶ್ರೀ ಎಸ್ ನಿಜಲಿಂಗಪ್ಪನವರ ನಂತರ ಶ್ರೀಮತಿ ಇಂದಿರಾಗಾಂಧಿಯವರು ಕಾಂಗ್ರೆಸಿನ ಅಧ್ಯಕ್ಷರಾಗುವ ಸಂಭವವಿದೆ ಎಂದು ಗುಂಟೂರು ವಾರ್ತೆ. ಅವರು ಒಪ್ಪದಿದ್ದರೆ ಉತ್ತರ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ ಅಜಿತ ಪ್ರಸಾದ ಜೈನರು ಅಧ್ಯಕ್ಷರಾಗಬಹುದು.

ಸಂಶಯಬೇಡ

ಸೇಲಂನಲ್ಲಿ ರಾಜಾಜಿಯವರು ಭಾಷಣ ಮಾಡುತ್ತಾ, ದ್ರಾವಿಡ ಮುನ್ನೇತ್ರ ಕಳಗಂ ಬಗ್ಗೆ ಬ್ರಾಹ್ಮಣರು ಸಂದೇಹ ಪಡಬೇಕಾದುದಿಲ್ಲ ಎಂದರು ಕಾಂಗ್ರೆಸ್ಸನ್ನು ಪರಾಜಯಗೊಳಿಸಬೇಕೆಂಬುದು ಸ್ವತಂತ್ರ ಹಾಗೂ ಡಿ ಎಂ ಕೆ ಗಿರುವ ಆದರ ಕಾರಣ ಜನಾವಣೆ ಹೊಂದಾಣಿಕೆ ಮಾಡಿಕೊಂಡಿದೆ ಎಂದರು.

ರಾಕ್ಷಸರ ಪತ್ತೆ

ರಷ್ಯದ ಭೂಗರ್ಭ ಶಾಸ್ತ್ರಜ್ಞರು ಪೂರ್ವ ಸೈಬೀರಿಯಾದಲ್ಲಿ ಓರ್ವ ರಾಕ್ಷಸನನ್ನು ನೋಡಿದುದಾಗಿ ಮಾಸ್ಕೊ ರೇಡಿಯೋ ತಿಳಿಸಿದೆ ಅವರು ನೀರಿನಲ್ಲಿ ಬ್ಯಾರಲ್ ಇದೆ ಎಂದು ಭಾವಿಸಿದರೆಂದು ಹತ್ತಿರ ನೋಡಲು ಅಂಡಿ ಉದ್ದದ ಮುಖದ ರಾಕ್ಷಸನೆಂದು ಗೊತ್ತಾಯಿತೆಂದು ವರದಿಯಾಗಿದೆ ಮತ್ತೊಬ್ಬ ರಾಕ್ಷಸ ಟಿಯೆನ್ ಷಾನ್ ಪರ್ವತಗಳಲ್ಲಿ ಗೋಚರವಾಗಿದ್ದಾನೆ.

ಇಂಗ್ಲೀಷ್ ಇರಲಿ

ಹೆಂಡರಿ ಶಿಕ್ಷಣ ಮಟ್ಟದಲ್ಲಿ ಇಂಗ್ಲೀಷು ಶಿಕ್ಷಣವನ್ನು ಜಾರಿಗೆ ತೆಗೆಯಬೇಕೆಂದು 11 ಸಹಸ್ರ ವಿದ್ಯಾರ್ಥಿಗಳು ಸಹಿ ಮಾಡಿ ಗುಜರಾತು ಸರ್ಕಾರಕ್ಕೆ ಮನವಿ ಸಲ್ಲಿಸಿದರೆಂದು ಅಹಮದಾಬಾದು ವರದಿ ತಿಳಿಸುತ್ತದೆ

ಶಿಸ್ತುಭಂಗದ ಆರೋಪದ ಮೇಲೆ ದೊಡ್ಡಬಳ್ಳಾಪುರದ ಮಂಡಲ ಕಾಂಗ್ರೆಸ ಸಮಿತಿ ರದ್ದಾಗಿದೆ.

ವಿಮಾನ ಪ್ರಚಾರ

ಶ್ರೀಮತಿ ನೆಹರು ಮನವಿಯನ್ನು ವಿಮಾನದ ಮೂಲಕ ಒಂದು ಕೋಟಿಯಷ್ಟು ಉತ್ತರ ಪ್ರದೇಶದ ಅರ್ಧಾಂಶ ವಿಮಾನದಲ್ಲಿ ಹಲ್ಲುವರು.

ಅರಮನೆ ಅಶ್ವಶಾಲಾ ಮತ್ತು
ಗಜಶಾಲಾ ಇಲಾಖೆ
ಮೈಸೂರು.

ಟೆಂಡರು ನೋಟೀಸು

ಸನ್ 1962—63 ನೇ ಸಾಲಿನಲ್ಲಿ ಅಂದರೆ ತಾರೀಖು 1—4—1962 ರಿಂದ ಆಗಾಯಿತು 31—3—1963 ರ ಪೂರ್ತಿ, ಅರಮನೆ ಅಶ್ವಶಾಲಾ ಮತ್ತು ಗಜಶಾಲಾ ಇಲಾಖೆಗಳಿಗೂ ಮತ್ತು ಅರಮನೆಯ ದೇವಸ್ಥಾನಗಳಿಗೂ ಸೌದೆ ಸರಬರಾಯಿ ಮಾಡಲು ಅಪೇಕ್ಷೆಯುಳ್ಳವರು ಸೀಲಾದ ಟೆಂಡರುಗಳನ್ನು 1962 ನೇ ಫೆಬ್ರವರಿ ಮಾಹೆ ತಾರೀಖು 19 ನೇ ಮಧ್ಯಾಹ್ನ 12 ಗಂಟೆಯೊಳಗಾಗಿ ಮೇಲ್ಕಂಡ ಇಲಾಖಾ ಆಫೀಸರ್ ಇನ್ ಚಾರ್ಜ್‌ರವರಿಗೆ ಈ ಕೆಳಗೆ ತಿಳಿಸಿರುವ ಮೇರೆ ಕೊಡತಕ್ಕದ್ದು. ಹೆಚ್ಚಿಗೆ ವಿಷಯುಗಳನ್ನು ಇಲಾಖೆಯಲ್ಲಿ ವಿಚಾರಿಸಿ ತಿಳಿದು ಕೊಳ್ಳತಕ್ಕದ್ದು.

(1) ಪೂರ್ತ ದಿಂಡಲು ಸೌದೆ ಸರಬರಾಯಿಗೆ.

(2) ಪೂರ್ತ ಕಾಡು ಸೌದೆ ಸರಬರಾಯಿಗೆ.

M. S. Narayanaswamy
Officer-in-Charge
Palace Stables
& Gajasala
Mysore

ಮೈಸೂರು
5-2-1962

ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ದರ್ಮಾಧಿಕಾರಿ
ದೈವಜ್ಞಶಿಖಾಮಣಿ
ಸಂಪತ್ಕುಮಾರ್ ಜೋಯಿಸರಿಂದ

18 ಜನವರಿ ಆಶ್ಲೇಷ

America's Accomplished
The Official portrait of Mrs. John F. Kennedy, who is scheduled to visit India in March

ವಿವಿಧ ವಿಷಯುಗಳು

ಭಾರತದಲ್ಲಿ ನೇಪಾಳದ ವಿರುದ್ಧ ಪ್ರಚಾರಣೆಗಳು ನಿಲ್ಲಿದ್ದರೆ, ಈ ಗೊಂದಲಗಳನ್ನು ಭಾರತದಲ್ಲೂ ಕಾಣಬೇಕಾದೀತು ಎಂದ ನೇಪಾಳದ ಪ್ರಧಾನ ಮಂತ್ರಿ ಶ್ರೀ ಕೀರ್ತಿನಿಧಿ ಬಿಸ್ತಾ, ಖಟಮಂಡುವಿನಲ್ಲಿ ತಿಳಿಸಿದ್ದಾರೆ

ಸ್ವತಂತ್ರ ಉದ್ದೇಶದವರ ಭಾಷ್ಯ ಬಚನ'ಸಿಂಗರು ನಾಪತ್ತೆ ಆಗಿರುವ ಸಂದರ್ಭದಲ್ಲಿ ಪರಿತೀಲಿಸಲು ಓರ್ವ ವಿಶೇಷ ಪೋಲೀಸು ಅಧಿಕಾರಿಯ ನೇಮಕವಾಗಿದೆ.

ದೆಹಲಿಯ ಹಿಂದೂಸ್ಥಾನ ಟೈಮ್ಸ್ ಪತ್ರಿಕಾಗಾರನಿಗೆ 48 ಗಂಟೆಗಳಲ್ಲಿ ರಾಜ್ಯ ಬಿಡುವಂತೆ ವಿದೇಶಿ ಖಟಮಂಡುವಿನಲ್ಲಿ ಆಜ್ಞೆ ಆಯಿತು.

ನಲಗೊಂಡ ಪಟ್ಟಣ ಹಾಗೂ ಮತ್ತ ಮುತ್ತ ಪ್ರದೇಶಗಳಿಗೆ ರಿಸರ್ವ್ ಪೋಲೀಸನ್ನು ಕಳಿಸಿದೆ ಎಂದು ಹೈದರಾಬಾದು ವಾರ್ತೆ.

ಈಗ ಭತ್ತದ ಬೆಳೆ ಎಷ್ಟಿದೆಯೋ ಅದರ ಇಪ್ಪತ್ತೈದರಷ್ಟು ಬೆಳೆ ಹೆಚ್ಚಾಗುವುದೆಂದು ನವ ದೆಹಲಿ ವಾರ್ತೆ ತಿಳಿಸುತ್ತದೆ.

ವಿವಿಧ ವಾರ್ತೆಗಳು

ಕಲಬುರಗಿ ಜಿಲ್ಲೆಯ ಅಫಜಲ್‌ಪುರ ತಾಲ್ಲೂಕಿನ ದೇವಲ ಗಂಗಾಪುರದಲ್ಲಿ ಈ ತಿಂಗಳ 13 ರಿಂದ 23 ರವರೆಗೆ ಜರುಗಲಿದ್ದು ಆ ಸಂದರ್ಭದಲ್ಲಿ ಅಲ್ಲಿ ಅನೇಕ ಜನರು ಸೇರುವ ಸಂಭವವಿದೆ. ಆಗ ಕಾಲರಾ ಮತ್ತು ಸಿಡುಬು ರೋಗ ಸಂಭವಿಸಬಹುದಾದ್ದರಿಂದ ಅಲ್ಲಿಗೆ ಹೋಗಬಯಸುವ ಯಾತ್ರಿಕರು ತಮ್ಮ ಗ್ರಾಮ ಅಥವಾ ಜಿಲ್ಲೆಯನ್ನು ಬಿಡುವದಕ್ಕಿಂತ ಮೊದಲು ಕಾಲರಾ ಮತ್ತು ಸಿಡುಬು ರೋಗ ವಿರುದ್ಧ ಸೂಜಿ ಮದ್ದು ಚುಚ್ಚಿಸಿಕೊಂಡು ಮತ್ತು ವೈಲಿ ಹಾಕಿಸಿಕೊಂಡು ಆ ಬಗ್ಗೆ ಪ್ರಮಾಣ ಪತ್ರವನ್ನು ಪಡೆದು ತಮ್ಮ ಸಂಗಡ ಒಯ್ಯುಬೇಕೆಂದು ಪ್ರಸ್ತಾವಿಸಲಾಗಿದೆ

ಮೈಸೂರು ರಾಜ್ಯದ ಲೋಕಸಭೆ ಮತ್ತು ಶಾಸನ ಸಭೆಗಳ ಮುಂಬರುವ ಸಾರ್ವತ್ರಿಕ ಚುನಾವಣೆಗಳ ಸಂಬಂಧದಲ್ಲಿ ಮತದಾನ ನಡೆಯುವ ಪ್ರದೇಶದಲ್ಲಿ ಸರ್ಕಾರಿ ನೌಕರರಿಗೆ ತಮ್ಮ ಮತಗಳನ್ನು ಕೊಡಲು ಅನುಕೂಲವಾಗುವುದಕ್ಕಾಗಿ ಎಲ್ಲ ಸರ್ಕಾರಿ ಕಚೇರಿಗಳು, ಕೋರ್ಟ್‌ಗಳು ಮತ್ತು ಶಿಕ್ಷಣ ಸಂಸ್ಥೆಗಳಿಗೆ ರಜೆಯು ದಿನವಿರುವುದು.

ನಾಳೆ ಸಂಜೆ 5 ಗಂಟೆಗೆ ಮೈಸೂರು ಪೌರಸಭೆ ಹಾಸ್ಟಲ್‌ನಲ್ಲಿ ಹಾಸ್ಟಲ್ ದಿನಾಚರಣೆ ನಡೆಯುವದು. ಶಾರದಾ ವಿಲಾಸ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಎಂ ಎಸ್ ರಾಮಸ್ವಾಮಿಯವರು ಅಧ್ಯಕ್ಷತೆ ವಹಿಸುವರು. ಪುರಸಭೆ ಅಧ್ಯಕ್ಷರಾದ ಶ್ರೀ ಹೆಚ್. ಕೆಂಪೇಗೌಡರು ಬಹುಮಾನ ವಿತರಣೆ ಮಾಡುವರು

ಕ್ರಿಮಿನಲ್ ಪ್ರೊಸಿಜರ್ ಕೋಡು ತಿದ್ದುಪಡಿ ಮಾಡುವ ಸುಗ್ರೀವಾಜ್ಞೆಯ ವಾಕಿಸ್ತಾನದ ಅಧ್ಯಕ್ಷ ಅಯೂಬ ಖಾನರು ಹೊಂಡಿಸಿರುವರು. ಪಾಕಿಸ್ತಾನದ ರಕ್ಷಣಾ ಶಾಸನದ ರೀತ್ಯ ಬಂಧಿತರಾಗಿರುವವರು ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸುವದನ್ನು ನಿಶೇಧಿಸಿದೆ

ಗುಜರಾತಿನ ಅಂಕಲೇಶ್ವರ ತೈಲ ಕ್ಷೇತ್ರದಿಂದ ಇತ್ತೀಚೆಗೆ ಇನ್ನೂರು ಟನ್ ಎಣ್ಣೆಯನ್ನು ಪಡೆಸಿಕೊಂಡು ಮೊದಲನೆಯ ರೈಲು ಎಣ್ಣೆಯನ್ನು ಶುದ್ಧಿ ಮಾಡುವ ಸಲುವಾಗಿ ಬೊಂಬಾಯಿನ ತೈಲ ಶುದ್ಧಿಕಾರಖಾನೆಗೆ ಹೋಯಿತು.

ತಮಿಳು ಜಿಲ್ಲೆಯ ಕರಾನಾಡ್‌ನಲ್ಲಿ ಕಾಂಗ್ರೆಸ್ಸು ಚುನಾವಣೆ ಸಭೆ ತೀರಿಸಿಕೊಂಡು ಕಾರುಗಳು ವಾಪಸು ಬರುತ್ತಿದ್ದಾಗ ಕಲ್ಲುಗಳನ್ನು ಬೀರಲು ಆದ ಘರ್ಷಣೆಯಲ್ಲಿ ಹತ್ತು ಮಂದಿ ಗಾಯಗೊಂಡರೆಂದು ಅಧಿಕೃತವಾಗಿದ್ದು ವಾರ್ತೆ ತಿಳಿಸಿದೆ.

ಕೊಂಡೇನಹಳ್ಳಿ ಕ್ಷೇತ್ರದಲ್ಲಿ ಕಾಂಗ್ರೆಸಿಗರೊಡನೆ ಆದ ಚುನಾವಣೆ ಘರ್ಷಣೆಯಲ್ಲಿ ದ್ರವಿಡ ಮುನ್ನೇತ್ರ ಕಳಗಂನ ಕೆಲವು ನಾಯಕರು ಗಾಯಗೊಂಡಿರುವರೆಂದು ಆಧಿಕೃತವಾಗಿರುವರೆಂದು ಹಿರಿಯೂರು ವಾರ್ತೆ. ಕಳಗಂ ಈ ಜಾರಿ ಪಿಎಸ್ಸಿಗೆ ಬೆಂಬಲಿಸುತ್ತದೆ.

ಮೈಸೂರು 15— ತಾ || 18 ಭಾನುವಾರ ನೀರಿನ ಸಪ್ಲೈಗೆ ಸಂಬಂಧಪಟ್ಟಿದಂತೆ ಸಂಬರಾಜು ಇಲ್ಲವಾದ ಪ್ರಯುಕ್ತ ಆ ದಿನ ಬೆಳಿಗ್ಗೆ 12 ಘಂಟೆಯಿಂದ ಸಾಯಂಕಾಲ 5 ಘಂಟೆಯವರೆಗೆ ನಗರದಲ್ಲಿ ನೀರಿನ ಸಂಬರಾಜು ಇರುವುದಿಲ್ಲವೆಂದು ಮುನಿಸಿಪಲ್ ಕಮಿಷನರವರು ತಿಳಿಸಿರುತ್ತಾರೆ.

ಚಿಂತಾಮಣಿ ಕ್ಷೇತ್ರದಿಂದ ಶ್ರೀ ಆರಾಜನೇಯ ರೆಡ್ಡಿ ಕಾಂಗ್ರೆಸಿನ ಅಧಿಕೃತ ಅಭ್ಯರ್ಥಿ ಎಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿ ನವದೆಹಲಿಯಿಂದ ಪ್ರಕಟಿಸಿದೆ.

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.

ವುಡ್‌ಲಾಂಡ್ ಕಿಕ್ಕಿರಿದ ಜನಸಂದಣಿಗೆ ಪ್ರದರ್ಶನವಾಗುತ್ತಿರುವ ಅಮೋಘ 2 ನೇ ವಾರ

.... 30,000 ಕ್ಕೂ ಹೆಚ್ಚು ಮಂದಿ ನೋಡಿ ಆನಂದಿಸಿದ್ದಾರೆ ....

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೆರಾ — 15-2-62 ರಿಂದ

ಸಹೋದರಿ (ತಮಿಳು)

ತಾರಾಗಣ— ಪ್ರೇಂ ನಜೀರ್, ಚಂದ್ರಬಾಬು, ಬಾಲಾಜಿ, ಡೇವಿಕ, ರಾಜಶ್ರೀ ಸುಲೋಚನ, ಪದ್ಮಿನಿ ಪ್ರಿಯದರ್ಶಿನಿ [ದಿನವಹಿ 3 ಆಟಗಳು]

ಮೈಸೂರುನಗರ (ದಕ್ಷಿಣ) ಕ್ಷೇತ್ರದಿಂದ ವಿಧಾನಸಭೆ ಚುನಾವಣೆ

— 25-2-62 —

ನಿಮ್ಮ ಪವಿತ್ರವಾದ ಓಟನ್ನು ಸ್ವತಂತ್ರ ಪಕ್ಷದ

ಡಾ|| ಎನ್. ಎಸ್. ನಾರಾಯಣರಾವ್

ಅವರಿಗೆ ಕೊಡಬೇಕಾಗಿ ವಿನಂತಿ — ಅವರ ಸೀರಿಯಲ್ ನಂ 3

ಅವರ ಗುರುತು ನಕ್ಷತ್ರ ಸ್ವತಂತ್ರದ ಮುಂದೆ X ಹೀಗೆ ಸೀಲ್ ಹಾಕಿ

Mrs Moeena Roy, wife of the Indian Consul General in New York, accepts the keys to a mobile field clinic for family planning on behalf of the Family Planning Association of India.